## ಜುಲೈ 4 ಅಮೆರಿಕದ ಸ್ವಾತಂತ್ರ್ಯ ದಿವಸ. ಆಗಸ್ಟ್ 15 ಭಾರತದ್ದು. ಎರಡೂ ದೇಶಗಳಲ್ಲಿ ಹೆಣ್ಣಿನ ಸ್ವಾತಂತ್ರ್ಯದ ವಿಷಯಕ್ಕೆ ಬಂದಾಗ ಅಷ್ಟೇನೂ ವ್ಯತ್ಯಾಸವಿಲ್ಲ.

ಕಾದಂಬರಿಕಾರ್ತಿ ವರ್ಜಿನಿಯಾ ವೂಲ್ಫ್ ತಮ್ಮ 'ರೂಮ್ ಆಫ್ ಒನ್ಸ್ ಓನ್' ಪುಸ್ತಕದಲ್ಲಿ ಶೇಕ್ಸ್‌ಪಿಯರ್‌ನಿಗೊಬ್ಬಳು ಅಷ್ಟೇ ಪ್ರತಿಭಾವಂತ ತಂಗಿ ಇದ್ದರೆ ಏನಾಗುತ್ತಿತ್ತು ಎಂದು ಕಲ್ಪನೆ ಮಾಡಿಕೊಳ್ಳುತ್ತಾರೆ.

'ಅವಳಿಗೆ ಅಧ್ಯಯನದ ಅವಕಾಶ ಕೊಡದೆ, ಅಡುಗೆ ಮಾಡಿಕೊಂಡಿರು ಎಂಬ ಆಜ್ಞೆ ನೀಡಿ, ಚಿಕ್ಕವಯಸ್ಸಿನಲ್ಲಿಯೇ ಮದುವೆ ಮಾಡಿ, ಆಕೆ ಆಗುವುದಿಲ್ಲ ಅಂತ ಹಟ ಹಿಡಿದರೆ ಹೊಡೆದು ಬಡಿದು, ಅಷ್ಟಕ್ಕೂ ಬಗ್ಗದಿದ್ದರೆ ಹುಚ್ಚಿ ಎಂಬ ಪಟ್ಟ ಕಟ್ಟಿ ಕಾಡಿನ ಗುಡಿಸಲೊಂದರಲ್ಲಿ ಕೂಡಿ ಹಾಕುತ್ತಿದ್ದರು' ಎಂಬುದು ಅವರ ಊಹೆ.

ಇತಿಹಾಸದ ಸೀಮೆಯುದ್ದಕ್ಕೂ ಹೆಣ್ಣಿನ ಪ್ರತಿಭೆಯನ್ನು ಕುಟುಂಬ ಅಡುಗೆ ಮತ್ತು ಮನೆಯ ನಿರ್ವಹಣೆಯ ಹೆಸರಿನಲ್ಲಿ ಹೇಗೆ ವ್ಯವಸ್ಥಿತವಾಗಿ ದಮನ ಮಾಡಲಾಗಿದೆ ಎಂಬ ಅಂಶದ ಮೇಲೆ ವೂಲ್ಫ್ ಈ ಪುಸ್ತಕದಲ್ಲಿ ಬೆಳಕು ಚೆಲ್ಲುತ್ತಾರೆ. ಶೇಕ್ಸ್‌ಪಿಯರನ ಸಾಹಿತ್ಯಕ್ಕೂ ಮೊಜಾರ್ಟನ ಸಂಗೀತಕ್ಕೂ ಮೀರಿದ ಯಾವ ಪ್ರತಿಭೆ ಅಡುಗೆ ಮನೆಯ ಒಲೆಯಲ್ಲಿ, ಸಮಾಜದ ಬಿರುಕುಗಳಲ್ಲಿ ಕಣ್ಮರೆಯಾಯಿತೋ ಎಂದು ಸಂಕಟಪಡುತ್ತಾರೆ.

***

ನಾನು ಅಮೆರಿಕಕ್ಕೆ ಬರುವ ಮೊದಲು ಇಲ್ಲಿನ ಹೆಣ್ಣುಮಕ್ಕಳ ಸ್ಥಿತಿ ಭಾರತಕ್ಕಿಂತ ವಿಭಿನ್ನವಾಗಿರಬಹುದು ಎಂದುಕೊಂಡಿದ್ದೆ. ಅಮೆರಿಕದಲ್ಲಿ ಹೆಣ್ಣಿನ ಸ್ಥಿತಿ, ಆಧುನಿಕತೆಯ ಲೇಪದಲ್ಲಿ ಭಿನ್ನವಾಗಿ ಕಂಡರೂ ಮೂಲದಲ್ಲಿ ಅದು ಭಾರತೀಯ ಹೆಣ್ಣುಮಕ್ಕಳಿಗಿಂತ ಹೆಚ್ಚೇನೂ ಬೇರೆಯಲ್ಲ. ಇದು ಭಾರತದ ಮೆಟ್ರೋಪಾಲಿಟನ್ ಸಿಟಿಗಳಲ್ಲಿ ದುಡಿವ ಹೆಣ್ಣಿನ ವಿಷಯದಲ್ಲೂ ಸತ್ಯ. ಹೆಣ್ಣುಮಕ್ಕಳು ದುಡಿಯುತ್ತಾರೆ ಎಂಬ ಒಂದೇ ಕಾರಣಕ್ಕೆ ಅವರಿಗೆ ಆರ್ಥಿಕ ಸ್ವಾತಂತ್ರ್ಯ ಲಭಿಸಿದೆ ಎಂದು ಹೇಳಲಾಗದು. ತಾವು ದುಡಿದ ತಿಂಗಳ ಸಂಬಳವನ್ನೆಲ್ಲ ಗಂಡನ ಕೈಗೇ ತಂದುಕೊಟ್ಟು ಅದೇ ಗಂಡನಿಂದ ತಮ್ಮ ಬಸ್ ಚಾರ್ಜಿಗೆ ಮಾತ್ರ ಹಣ ಪಡೆದುಕೊಂಡು ಹೋಗುವ ಹೆಣ್ಣುಮಕ್ಕಳು ನಮ್ಮ ನಡುವೆಯೇ ಇದ್ದಾರೆ. ಜೊತೆಗೆ ಬಸಿರು ಎಂಬ ಜೈವಿಕ ಸ್ಥಿತಿಯೊಂದರಿಂದಲೇ ಮಹಿಳೆಯ ಸ್ವಾತಂತ್ರ್ಯದ ಪರಿಮಿತಿಯನ್ನು ವ್ಯಾಖ್ಯಾನಿಸುವುದು ಎಲ್ಲೆಡೆ ಸಾಮಾನ್ಯವಾಗಿದೆ. ಹೆಣ್ಣು ಹೊರಗೆ ದುಡಿಯಲಿ ಬಿಡಲಿ ಮನೆಯ ನಿರ್ವಹಣೆ ಮತ್ತು ಮಕ್ಕಳ ಆರೈಕೆ ಎಂಬುದು ಮಹಿಳೆಯದೇ ಮುಖ್ಯ ಕರ್ತವ್ಯ ಎಂಬ ಅಘೋಷಿತ ನೀತಿ ಜನಮಾನಸದಲ್ಲಿ ಬದಲಾಗುವವರೆಗೂ ಈ ಅಗ್ನಿದಿವ್ಯದಿಂದ ಮುಕ್ತಿಯಿಲ್ಲ.

ಅಮೆರಿಕದಲ್ಲಿ ಪುರುಷ ಮತ್ತು ಮಹಿಳೆಯರ ಆದಾಯವನ್ನು ಹೋಲಿಸಿದರೆ ಪುರುಷ ಗಳಿಸುವ ಒಂದು ಡಾಲರಿಗೆ ಮಹಿಳೆ ಎಂಬತ್ತು ಸೆಂಟ್‌ಗಳನ್ನು ಮಾತ್ರ ಗಳಿಸುತ್ತಾಳೆ. ಭಾರತದಲ್ಲಿ ಪುರುಷ ಗಳಿಸುವ ಪ್ರತೀ ನೂರು ರೂಪಾಯಿಗೆ ಮಹಿಳೆ 79 ರೂಪಾಯಿಗಳನ್ನು ಮಾತ್ರ ಗಳಿಸುತ್ತಾಳೆ. ಸಮಾನವಾಗಿ ಕಲಿತು ಸಮಾನ ಉದ್ಯೋಗದಲ್ಲಿರುವವರಲ್ಲೇ ಈ ಅಂತರ ಇರಬೇಕಾದರೆ ಹೆಂಡತಿ ಕಡಿಮೆ ಕಲಿತು ಅಲ್ಪ ಸಂಬಳ ತರುವ ನೌಕರಿ ಮಾಡಿದರೆ ಆ ವರಮಾನದ ವ್ಯತ್ಯಾಸವನ್ನು ತುಂಬಿಕೊಡಲು ಹೆಣ್ಣು ಮನೆಯಲ್ಲೂ ದುಡಿಯಬೇಕಿರುವುದು ಗಂಡ ಹೆಂಡತಿಯರಿಬ್ಬರಿಗೂ ಸಹಜವೆನ್ನಿಸಬಹುದು. ಹೀಗಾದಾಗ ಹೆಣ್ಣು ತನ್ನ ವೃತ್ತಿಯಲ್ಲಿ ಮುಂದುವರೆಯಲು ಬೇಕಾದ ಕೌಶಲ್ಯಗಳನ್ನು ವೃದ್ಧಿಸಿಕೊಳ್ಳಲು ಸಮಯ ಸಾಲದಾಗಿ ವಿಷಯದ ಪರಿಣತಿಯಲ್ಲಿ ಹಿಂದುಳಿಯುವಂತಾಗುತ್ತದೆ.

ಆಧುನಿಕತೆಯ ಉತ್ತುಂಗದಲ್ಲಿರುವ ಅಮೆರಿಕದಲ್ಲಿಯೂ ಹೆಣ್ಣು ತನ್ನ ಆಯ್ಕೆಯ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ನಿತ್ಯ ಸಣ್ಣ ಪುಟ್ಟ ಹೋರಾಟಗಳನ್ನು ಮಾಡಬೇಕಿದೆ. ಇಲ್ಲಿಯೂ ಎಷ್ಟೋ ದುಡಿಯುವ ತಾಯಂದಿರು ಮುಂಜಾನೆ ಬೇಗ ಎದ್ದೋ, ತಡರಾತ್ರಿಯವರೆಗೆ ಮಲಗದೆಯೋ ಮನೆಯ ಕೆಲಸವನ್ನೆಲ್ಲ ಮಾಡಿಟ್ಟು ನಂತರ ತಮ್ಮ ವೃತ್ತಿಜೀವನದ ಏಳ್ಗೆಯ ಕುರಿತು ಯೋಚಿಸುವಂತಾಗಿದೆ. ಹೀಗೆ ನೋಡಿದಾಗ ಪ್ರಪಂಚದಾದ್ಯಂತ ಎಲ್ಲೂ ಹೆಣ್ಣಿನ ಸ್ವಾತಂತ್ರ್ಯ ಅವಳ ಕೈಯಲ್ಲಿಲ್ಲ ಅನ್ನಿಸುತ್ತದೆ. ಆಕೆ ಅದನ್ನು ಮನೆಯ ಹಿರಿಯರಿಂದಲೋ, ತಂದೆಯಿಂದಲೋ, ಗಂಡನಿಂದಲೋ, ಸಮಾಜದಿಂದಲೋ ಪಡೆದುಕೊಳ್ಳಬೇಕು. ಆ ದಾರಿಯಲ್ಲಿ ಸಾಗುವಾಗ ಅವತರಿಸಬಹುದಾದ ಅವಘಡಗಳನ್ನು ತಾನೇ ಭರಿಸಬೇಕು. ಎಷ್ಟೋ ಹೆಣ್ಣುಗಳು ಸ್ವಾತಂತ್ರ್ಯ ಎಂದರೇನೆಂದು ಕಂಡುಕೊಳ್ಳುವ ಮೊದಲೇ ತಂದೆಯ ಮನೆಯಿಂದ ಗಂಡನ ಮನೆ ಸೇರಿಯಾಗಿರುತ್ತದೆ.

ಜುಲೈ 4 ಅಮೆರಿಕದ ಸ್ವಾತಂತ್ರ್ಯ ದಿವಸ. ಆಗಸ್ಟ್ 15 ಭಾರತದ್ದು. ಎರಡೂ ದೇಶಗಳಲ್ಲಿ ಹೆಣ್ಣಿನ ಸ್ವಾತಂತ್ರ್ಯದ ವಿಷಯಕ್ಕೆ ಬಂದಾಗ ಅಷ್ಟೇನೂ ವ್ಯತ್ಯಾಸವಿಲ್ಲ.

ಅಮೆರಿಕದಲ್ಲಿ ಹೆಣ್ಣಿನ ಮೇಲೆ ಮದುವೆಯಾಗಲೇಬೇಕು ಎಂಬ ಒತ್ತಾಯವಿಲ್ಲ. ಲಿವ್‌ಇನ್ ಇರುವವರು, ಸಿಂಗಲ್ ಮದರ್‌ಗಳು ಇಲ್ಲಿನ ಸಮಾಜದ ಎಲ್ಲ ಸ್ತರಗಳಲ್ಲಿಯೂ ಇದ್ದಾರೆ. ಈ ಕುರಿತಾಗಿ ಯಾರೂ ಕೊಂಕು ನುಡಿಯುವುದು,



ವರ್ಜಿನಿಯಾ ವೂಲ್ಫ್